ಓ.ಎಸ್. ನಂ. 27/2020

ಪಿ.ಡಬ್ಲ್ಯೂ: 01 (ದುರುಗಪ್ಪ)

ದಿನಾಂಕಃ 08-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ ಹೆಚ್ ಪಿ ಪ್ರತಿವಾದಿ ಪರ ವಕೀಲರಿಂದ.**

ದಾವಾ ಆಸ್ತಿಯ ಸರ್ವೆ ನಂಬರ 557/2 ಮೂಲ ವಿಸ್ತೀರ್ಣ 16 ಎಕರೆ ಇರುತ್ತದೆ. ದಾವಾ ಆಸ್ತಿ ಮೂಲತಃ ನನ್ನ ತಾತನವರ ಆಸ್ತಿ. ನನ್ನ ತಾತನ ಹೆಸರು ಪಾಲಯ್ಯ. ಪಾಲಯ್ಯನಿಗೆ ಒಬ್ಬಳು ತಂಗಿ ಅಕ್ಕಮ್ಮ ಇದ್ದಳು ಅಂದರೆ ನನಗೆ ಗೊತ್ತಿಲ್ಲ. ಆಕೆ ನಮಗೆ ಅಜ್ಜಿ ಆಗಬೇಕು ಎಂದರೆ ನನಗೆ ಗೊತ್ತಿಲ್ಲ. 1982-83 ರಲ್ಲಿ ಸದರಿ ದಾವಾ ಸ್ವತ್ತು ಅಕ್ಕಮ್ಮನ ಹೆಸರಿಗೆ ಇತ್ತು ಎಂದರೆ ಗೊತ್ತಿಲ್ಲ. ನನ್ನ ತಂದೆಗೆ ಆರೋಗ್ಯವಾಗಿದ್ದಾರೆ ಎಂದರೆ ಅವರಿಗೆ ಕಿವಿ ಕೇಳಿಸುವುದಿಲ್ಲ. 2004-2005 ರಲ್ಲಿ ಅಕ್ಕಮ್ಮರವರು ದಾವಾ ಆಸ್ತಿ ತಮಗೆ ಸೇರುತ್ತದೆ ಎಂದು ತಹಶೀಲ್ದಾರ ಕವಚೇರಿಯಲ್ಲಿ ದಾವಾ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ನನ್ನ ತಂದೆ ಹಾಜರಾಗಿರಲಿಲ್ಲ, 1 ನೇ ಪ್ರತಿವಾದಿಯ ಗಂಡ ಅದನ್ನು ನಡೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ನನ್ನ ತಂದೆ ದಾವಾ ಆಸ್ತಿ ಬೇಡ ಎಂದು ನನಗೆ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. 30 ವರ್ಷಗಳ ಹಿಂದೆ ನನ್ನ ತಂದೆ ದಾವಾ ಆಸ್ತಿ ತಮಗೆ ಬೇಡ ಎಂದು ಅದರ ಬದಲಾಗಿ ಹಣವನ್ನು ಪಡೆದಿದ್ದರು ಎಂದರೆ ಆ ರೀತಿ ಹೇಳಿರುವುದಿಲ್ಲ. ನ್ಯಾಯಾಲಯಕ್ಕೆ ಬಂದರೆ ಆ ವಿಚಾರ ತಿಳಿದು ಬರುತ್ತದೆ ಎಂದು ಸಾಕ್ಷ್ಯ ನುಡಿಯಲು ಬಂದಿಲ್ಲ ಎಂದರೆ ಆತನಿಗೆ ಕಿವಿ ಕೇಳಿಸುವುದಿಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಬದಲಾಯಿಸುವಾಗ ನಾವು ತಕರಾರು ಇಲ್ಲ ಎಂದು ಹೇಳಿರುತ್ತೇವೆ ಎಂದರೆ ಹೇಳಿರುವುದಿಲ್ಲ. ನಾವು ತಕರಾರು ಮಾಡದ ಕಾರಣ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಗಳು ಬದಲಾಗಿವೆ ಎಂದರೆ ನಮಗೆ ಆಗ ತಿಳುವಳಿಕೆ ಇರಲಿಲ್ಲ. ನಮ್ಮ ತಂದೆ ಹಣ ಪಡೆದಿದ್ದ ಕಾರಣ ನಾವು ಯಾರು ತಕರಾರು ಮಾಡಿಲ್ಲ ಎಂದರೆ ಇಲ್ಲ. ದಾವಾ ಆಸ್ತಿಯನ್ನು ಈಗ 1 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದರೆ ಎಲ್ಲರೂ ಇದ್ದೇವೆ. ದಾವಾ ಆಸ್ತಿಗೂ ನಮಗೂ ಸಂಬಂಧಯಿಲ್ಲದಿದ್ದರೂ ಸಹ ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ಅಕ್ಕಮ್ಮನ ಹೆಸರಿನಲ್ಲಿದ್ದ ಪಹಣಿಗಳನ್ನು ಹೊರತುಪಡಿಸಿ ನಮಗೆ ಅನುಕೂಲವಾಗುವಂತಹ ಪಹಣಿಗಳನ್ನು ಮಾತ್ರ ಸಲ್ಲಿಸಿದ್ದೇವೆ ಎಂದರೆ ಸರಿ. ಅಕ್ಕಮ್ಮ ನನ್ನ ತಾತನ ತಂಗಿ. ನನಗೆ ದಾವಾ ಆಸ್ತಿಯಲ್ಲಿ ಹಕ್ಕುಯಿಲ್ಲದಿದ್ದರೂ ಸಹ ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯ**

**ಮರು ವಿಚಾರಣೆಃ ಇಲ್ಲ**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.